ಅಧ್ಯಕ್ಷರು.—ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಆಗಿದೆ. ಮಾನ್ಯ ಮಂಖ್ಯಿ ಮಂತ್ರಿಗಳು ನ್ಯಾಯಾಂಗ ತನಿಖೆಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ.

SRI D. DEVARAJ URS.—Issue of licences does not come to the notice of the Chief Minister, I know. But sometimes at lower levels certain things will have heppened. ಇಂತಿಂತಹದ್ದು ಆಗಿರಬಹುದೆಂದು ಅನುಮಾನ ಇದೆ. ಪತ್ರಿಕೆಯವರೂ ಸಹಾ ಎಲ್ಲವನ್ನೂ ತಿಳಿದು ಬರೆದಿದ್ದಾರೆಂದು ಹೇಳಿದರೆ ನೀವು ಸುಮ್ಮನೆ ಅವರ ಮೇಲೆ ಕೋಪ ಮಾಡಿದರೆ ಅರ್ಥವಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಾನು ಕೋಪ ಮಾಡಬೇಕೆಂದು ಹೇಳಿದ್ದಲ್ಲ. ಈ ಒಂದು ವಿಚಾರವನ್ನು ನಾವು ಗಹನವಾಗಿ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ನಾವು ಶಾಂತಿ ಸೌಹಾರ್ದದಿಂದ ಈ ಒಂದು ದುರ್ಘಟನೆಯ ಬಗ್ಗೆ ಚರ್ಚೆ ಮಾಡಲು ಸೇರಿರುವಾಗ ಏತಕ್ಕೋಸ್ಕರ...

ಶ್ರೀ ಡಿ. ದೇವರಾಜಅರಸ್.—ಏನಾಯಿತು?

ಶ್ರೀ ಆರ್. ಗುಂಡೂರಾವ್.—ರಾಜಕೀಯ ತಂದಿರಬಹುದು, ಹಾಗೆ ಹೀಗೆ ಎಂದು...

ಶ್ರೀ ಡಿ. ದೇವರಾಜಅರಸ್.—ಲೈಸೆನ್ಸ್ ಕೊಡುವಾಗ ರಾಜಕೀಯ ಪ್ರಭಾವ ಇದ್ದಿರಬಹುದೆಂದು ಹೇಳಿರುತ್ತಾರೆ.

ಶ್ರೀ ಆರ್. ಗುಂಡೂರಾವ್.—ತಮ್ಮ ಅನುಮಾನವನ್ನು ಹೇಳಿದ್ದೀರಿ. ಆದ್ದರಿಂದಲೇ ನ್ಯಾಯಾಂಗ ತನಿಖೆಗೆ ಒಪ್ಪಿಗೆಯನ್ನು ನೀಡಲಾಗಿದೆ. ಈ ಒಂದು ವಿಷಯದ ಮೇಲೆ ಚರ್ಚೆ ಮಾಡಬೇಕೆಂದಾಗ ಇದೆಲ್ಲಾ...

ಶ್ರೀ ಜೆ. ಎಚ್. ಪಟೇಲ್.—ಇವರು ಹೇಳಿದ್ದೂ ಸರಿ, ಅವರು ಹೇಳಿದ್ದೂ ಸರಿ, ಆದರೆ ಇಲ್ಲಿ ತಾಪದ ಬದಲು ಕೋಪ ಏಕೆ ಬಂತು?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಕೊಟ್ಟ ಸಲಹೆಗಳನ್ನು ನಾನು ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಕಾರ್ಯಕ್ರಮ ಕೈಗೊಂಡಿದ್ದೇವೆ. ಈ ದುರಂತದ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಪಘಾತಗಳು ಬೇಕಾದಷ್ಟು ಆಗುತ್ತವೆ ಇಂತಹ ಕಾರಣಕ್ಕೇ ಇಂತಹ ಅಪಘಾತ ಆಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಿಮಾಚಲ ಪ್ರದೇಶದಲ್ಲಿ ಅಂತಹ ಚಳಿಯಲ್ಲಿಯೇ ರಾಜಭವನ ಸುಟ್ಟುಹೋಯಿತು. ಇಂತಹ ಅಪಘಾತಗಳು ಆದಾಗ ಪ್ರತಿಯೊಬ್ಬರೂ ದುಃಖಿಪಡುತ್ತಾರೆ. ಆದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈ ನ್ಯಾಯಾಂಗ ತನಿಖೆಗೆ ನ್ಯಾಯಾಧೀಶರನ್ನು ನೇಮಕ ಮಾಡುವುದಕ್ಕೆ ಉಚ್ಚನ್ಯಾಯಾಲಯದವರನ್ನು ಕೇಳಿಕೊಳ್ಳುತ್ತೇನೆ. ಆ ತನಿಖೆ ನಡೆದು ತೀರ್ಪು ಬಂದಮೇಲೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರ ಆಲೋಚನೆ ಮಾಡುತ್ತದೆ.

Election to Senate of Mysore University

MR. SPEAKER.—In connection with the election to the Senate of the Mysore University as the number of nominations is equal to the number of places to be filled, the following members have been declared elected to the Senate of the Mysore University and there will be no election in this behalf.

Sriyuths:

(1) Andanaiah
(2) M. Madaiah
(3 G. Raju Gowda
(4) P. Ram Dev
(5) P.K. Ranganathan.

ಸಭೆಯ ಕೆಲವು ಮಾನ್ಯ ಸದಸ್ಯರು ಈ ದಿನ ಸಭೆಯ ಪಟ್ಟಿಯಲ್ಲಿ ಏನೇನು ಕಾರ್ಯಕ್ರಮಗಳು ಇದ್ದವು ಅವುಗಳನ್ನು ನಡೆಸುವುದೂ ಬೇಡ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನು ಆ ಅಭಿಪ್ರಾಯಕ್ಕೆ ಮಾನ್ಯತೆ ಕೊಟ್ಟು ಈ ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ ಏನೇನು ಕಾರ್ಯಕ್ರಮಗಳೂ ಇದ್ದವು ಅವುಗಳನ್ನು ನಡೆಸುವುದು ಬೇಡವೆಂದು ತೀರ್ಮಾನಕ್ಕೆ ಬಂದಿದ್ದೇನೆ. ಆದ್ದರಿಂದ ಇಂದಿನ ಕಾರ್ಯಕ್ರಮಗಳನ್ನು ಇಲ್ಲಿಗೆ ಮುಕ್ತಾಯ ಮಾಡಿ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದೇನೆ.

(ಸಭೆಯು ೩ ಗಂಟೆ ೩೫ ನಿಮಿಷಕ್ಕೆ ಮುಕ್ತಾಯವಾಗಿ ನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)